## ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ ನ್ಯಾಯಾಲಯ
## ಹಿರೇಕೆರೂರು

**ಸಿ ಸಿ ನಂ: 280/2019**

ಸಿ .ಡಬ್ಲ್ಯೂ-07
ಪಿ .ಡಬ್ಲ್ಯೂ-05

| | | |
|---|---|---|
| ಹೆಸರು | : | ಪರಮೇಶಗೌಡ |
| ತಂದೆ ಹೆಸರು | : | ಹೇಮನಗೌಡ ಪಾಟೀಲ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗಂಗಾಪುರ |

ಇಂದು ದಿಃ **23-03-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ದಿಃ 04-07-2018 ರಂದು ಬೆಳಗಿನ ಜಾವ ಗಂಗಾಪುರ ಗ್ರಾಮದ ಆಂಜನೇಯ ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನಗಳಲ್ಲಿ ಕಳ್ಳತನವಾಗಿತ್ತು. ನಮಗೆ ದಿಃ 05-07-2018 ರಂದು ಬೆಳಿಗ್ಗೆ ವಿಷಯ ಗೊತ್ತಾಗಿರುತ್ತದೆ. ನಾನು, ಚಾಸಾ-5 ಹಾಗೂ 6 ರವರು ಸೇರಿ ದೇವಸ್ಥಾನಕ್ಕೆ ಹೋಗಿರುತ್ತೇವೆ ಹಾಗೂ ಅಲ್ಲಿ ಸಾರ್ವಜನಿಕರು ಸೇರಿದ್ದರು. ಅಲ್ಲಿಗೆ ಚಾಸಾ-1 ರವರು ಬಂದಿರುತ್ತಾರೆ. ಚಾಸಾ-5 ರವರು ಫೋನ್ ಮಾಡಿ ಚಾಸಾ-1 ರವರಿಗೆ ವಿಷಯ ತಿಳಿಸಿರುತ್ತಾನೆ. ಈ ಆಂಜನೇಯ ದೇವಸ್ಥಾನದಲ್ಲಿ ಅಂದಾಜು 2,500/- ರೂ. ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನದಲ್ಲಿ 2000/- ರೂ. ಕಳ್ಳತನವಾಗಿತ್ತು. ನಮ್ಮ ಊರ ಪಕ್ಕದಲ್ಲಿರುವ ಚಿಕ್ಕಮತ್ತೂರ ಗ್ರಾಮದ ಆಂಜನೇಯ ಹಾಗೂ ಮಾಸ್ತೇಮ್ಮ ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನವು ದಿಃ 04-07-2018 ರಂದು ಆಗಿತ್ತು. ಸದರಿ ವಿಷಯ ನಮಗೆ ದಿಃ 05-07-2018 ರಂದು ಗೊತ್ತಾಗಿರುತ್ತದೆ. ನಮ್ಮನ್ನು ಚಾಸಾ-4 ರವರು ಚಿಕ್ಕಮತ್ತೂರಿಗೆ ಕರೆದಿರುತ್ತಾರೆ. ಅಲ್ಲಿ ಆಂಜನೇಯ ದೇವಸ್ಥಾನದಲ್ಲಿ ಅಂದಾಜು 2,000/- ರೂ. ಹಾಗೂ ಮಾಸ್ತೇಮ್ಮ ದೇವಸ್ಥಾನದಲ್ಲಿ 2000/- ರೂ. ಕಳ್ಳತನವಾಗಿತ್ತು. ದಿಃ 04-07-2018 ರಂದು ರಾತ್ರಿ 10-00 ಗಂಟೆಯಿಂದ ಬೆಳಗಿನ ಜಾವ 6-00 ಗಂಟೆಯ ಮಧ್ಯ ಕಳ್ಳತನವಾಗಿತ್ತು. ಚಾಸಾ-1 ರವರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ. ಆ ಕುರಿತು ನಾನು ದಿಃ 07-07-2018 ರಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಯು. ಬಿ. ಜೆ. ವಕೀಲರಿಂದಃ

ಗಂಗಾಪುರದ ಕೊಡಿ ಕೆಂಚಮ್ಮ ದೇವಸ್ಥಾನದ ಕಮೀಟಿಯಲ್ಲಿ ನಾನು ಸದಸ್ಯ ಇರುತ್ತೇನೆ. ಸದರಿ ದೇವಸ್ಥಾನದ ಕಮೀಟಿಯ ಅಧ್ಯಕ್ಷ ಮಲ್ಲೇಶಪ್ಪ ಬಾಸೂರು ಇರುತ್ತಾನೆ. ದೇವಸ್ಥಾನದ ಟ್ರಸ್ಟ ಕಮೀಟಿಯವರಿಗೆ ಪಿರ್ಯಾದಿಯನ್ನು ಕೊಡಲು ತೊಂದರೆ ಇರಲಿಲ್ಲ. ದಿಃ 05-07-2018 ರಂದು ಚಾಸಾ-5 ರವರು ಬೆಳಿಗ್ಗೆ 9-00 ಗಂಟೆಗೆ ಫೋನ್ ಮಾಡಿರುತ್ತಾರೆ. ಪಿ. ಎಸ್. ಐ. ಮತ್ತು ಪೋಲಿಸರ ಸ್ಥಳಕ್ಕೆ ಬಂದಿದ್ದರು. ಪೋಲಿಸರು ಸ್ಥಳಕ್ಕೆ ಬಂದಾಗ ಪಿರ್ಯಾದಿಯನ್ನು ಕೊಡಲು ತೊಂದರೆ ಇರಲಿಲ್ಲ.

**<u>ಸಿ ಸಿ ನಂ: 280/2019</u>**

ಸಿ .ಡಬ್ಲ್ಯೂ-07
ಪಿ .ಡಬ್ಲ್ಯೂ-05

ದಿಃ 07-07-2018 ರಂದು ಚಾಸಾ-1 ರವರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ. ದಿಃ 07-07-2018 ರಂದು ಬೆಳಿಗ್ಗೆ 11-00 ಗಂಟೆಗೆ ಚಾಸಾ-1 ರವರ ಮುಂದೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ. ಯಾವ ಯಾವ ದೇವಸ್ಥಾನದಲ್ಲಿ ಎಷ್ಟು ಎಷ್ಟು ಹಣ ಹೋಗಿತ್ತು ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಯಾರು ಕಳ್ಳತನ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ದಿಃ 04-07-2018 ರಂದು ಯಾವುದೇ ರೀತಿ ಹುಂಡಿ ಒಡೆದು ಕಳ್ಳತನ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕಮತ್ತೂರು ಗ್ರಾಮದ ದೇವಸ್ಥಾನದಲ್ಲಿ ಯಾವುದೇ ರೀತಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ದಿಃ 04-07-2018 ರಂದು ಯಾವುದೇ ಕಳ್ಳತನ ಆಗದೇ ಇದ್ದರು ಸಹ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 23-03-2022.

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು